Enquiry or atleast the COD Enquiry? We are losing faith in the Government. In other incidents for example, death in Police custody in Gulbarga, in Shahabad incidents etc., you have ordered for Judicial enquiry. Why did you not order Judicial Enquiry here?

MR. SPEAKER.—Have those Judicial Enquiries started functioning?

SRI QUMARUL ISLAM.—Yes Sir. In Gulbarga, it has started functioning.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಪೋಲೀಸ್ ಕಸ್ಟಡಿಯಲ್ಲಿ ಲಾಕಪ್ ಡೆತ್ಸ್ ಆದರೆ ನಾವು ಸಿ.ಒ.ಡಿ, ಎನ್‌ಕ್ವೈರಿಯನ್ನು ತಕ್ಷಣ ಮಾಡಿಸುತ್ತೇವೆಂದು ಹೇಳಿದ್ದಾರೆ. ಅದು ನಮ್ಮ ಸರ್ಕಾರದ ನೀತಿ ಕೂಡ ಆಗಿದೆ. ನಾವು ಅದನ್ನು ಈಗಾಗಲೇ ಘೋಷಣೆ ಮಾಡಿದ್ದೇವೆ.

SRI QUMARUL ISLAM.—Whether the Government will order for Judicial Enquiry or if not atleast COD Enquiry?

SRI M. VEERAPPA MOILY.—C.O.D Enquiry will be done.

ಅಧ್ಯಕ್ಷರು.—ಜುಡಿಷಿಯಲ್ ಎನ್‌ಕ್ವೈರಿ ಅಲ್ಲ. ಸಿ.ಒ.ಡಿ. ಎನ್‌ಕ್ವೈರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಹೌದು. ಸಿ.ಓ.ಡಿ. ಎನ್‌ಕ್ವೈರಿ.

ಅಧ್ಯಕ್ಷರು.—ಇದರಿಂದ ಮಾನ್ಯ ಸದಸ್ಯರಿಗೆ ಸಮಾಧಾನ ಆಗಿರಬಹುದು.

೨) ಸುಪ್ರೀಂ ಕೋರ್ಟಿನ ಆದೇಶದ ಮೇರೆಗೆ ದಿನಗೂಲಿ ನೌಕರರನ್ನು ಖಾಯಂಗೊಳಿಸುವಾಗ ಮಾಸಲಾತಿ ನಿಯಮವನ್ನು ಅನುಸರಿಸುವಂತೆ ಒತ್ತಾಯ

ಶ್ರೀ ವಂಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಅಧ್ಯಕ್ಷರೇ ಸುಪ್ರೀಂ ಕೋರ್ಟಿನ ಆದೇಶದ ಮೇರೆಗೆ ದಿನಗೂಲಿ ನೌಕರರನ್ನು 'ಖಾಯಂಗೊಳಿಸುವಾಗ ಮಾಸಲಾತಿ ನಿಯಮ ಅನುಸರಿಸುವುದರ ಬಗ್ಗೆ ಮುಖ್ಯ ಮಂತ್ರಿಯವರ ಗಮನ ಸೆಳೆಯಲಿಚ್ಛಿಸುತ್ತೇನೆ :—

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು ಮತ್ತು ಸಂಸದೀಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ನಾನು ಈ ಹೇಳಿಕೆಯನ್ನು ಓದುತ್ತೇನೆ.

ದಿನಗೂಲಿ ನೌಕರರನ್ನು ಖಾಯಂಗೊಳಿಸುವಾಗ ಮಾಸಲಾತಿ ನಿಯಮ ಅನುಸರಿಸುವ ಬಗ್ಗೆ

ಧಾರವಾಡ ಜಿಲ್ಲಾ ಲೋಕೋಪಯೋಗಿ ಇಲಾಖಾ ಯೂನಿಯನ್ ಮತ್ತು ಇತರೆ ೪ ಸಂಘಗಳು ದಿನಗೂಲಿ ಕೆಲಸಗಾರರನ್ನು ಖಾಯಂಗೊಡಿಸಬೇಕೆಂದು ಮತ್ತು ಅವರಿಗೆ ಸರ್ಕಾರಿ ನೌಕರರಿಗೆ ನೀಡುತ್ತಿರುವ ವೇತನವನ್ನು ಅವರಿಗೂ ಮಂಜೂರು ಮಾಡುವಂತೆ ಕೋರಿ ಮೇ ೧೯೮೩ರಲ್ಲಿ ಸರ್ವೋನ್ನತ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿತ್ತು. ದಿನಗೂಲಿ ಕೆಲಸಗಾರರನ್ನು ಕೆಲಸದಿಂದ ತೆಗೆಯಕೂಡದೆಂದು ದಿನಾಂಕ ೨೫-೭-೧೯೮೩ ರಂದು ಸರ್ವೋನ್ನತ ನ್ಯಾಯಾಲಯವು ಏಕಪಕ್ಷೀಯ ಮಧ್ಯಕಾಲಿಕ ಆದೇಶವನ್ನು ನೀಡಿತು.

೨. ಕರ್ನಾಟಕ ರಾಜ್ಯ ರೇಷ್ಮೆ ನೌಕರರ ಸಂಘ ಮತ್ತು ಇತರ ದಿನಗೂಲಿ ನೌಕರರ ಸಂಘಗಳು ಸರ್ವೋನ್ನತ ನ್ಯಾಯಾಲಯದ ಮುಂದೆ ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆಗಳು ೪೮೮ ಮತ್ತು ೨೩೬೬ ದಿನಾಂಕ ೨೦-೩-೧೯೮೮ ರಂದು ವಿಚಾರಣೆಗೆ ಬಂದಾಗ ೧-೪-೧೯೮೯ರಿಂದ ಜಾರಿಗೆ ಬರುವಂತೆ 'ಡಿ' ಪ್ರವರ್ಗಕ್ಕೆ ಸೇರಿದ ದಿನಗೂಲಿ ನೌಕರರಿಗೆ ರೂ. ೫೦೦ ಮಾಸಿಕ ಡಿ ಪ್ರವರ್ಗಕ್ಕೆ ಸೇರಿದ ಮಾಸಿಕ ವೇತನ ಸಿಬ್ಬಂದಿಗೆ ರೂ ೭೮೦, ಮಾಸಿಕ 'ಸಿ' ಪ್ರವರ್ಗಕ್ಕೆ ಸೇರಿದ ದಿನಗೂಲಿ ನೌಕರರಿಗೆ ರೂ. ೬೫೦ ಮಾಸಿಕ 'ಬಿ' ಪ್ರವರ್ಗಕ್ಕೆ ಸೇರಿದ ದಿನಗೂಲಿ ನೌಕರರಿಗೆ ರೂ. ೧೦೦೦ ಮಾಸಿಕವಾಗಿ ನೀಡಬೇಕೆಂದೂ ಆದೇಶಿಸಿತು. ಆದರಂತೆ ಆದೇಶ ಸಂಖ್ಯೆ ಡಿಪಿಎಆರ್ ೨೨ ಎಸ್‌ಎಲ್‌ಸಿ ೮೯, ದಿನಾಂಕ ೨೯-೪-೧೯೮೯ ರಲ್ಲಿ ದಿನಾಂಕ ೧-೪-೧೯೮೯ ರಿಂದ ಅನ್ವಯವಾಗುವಂತೆ ಆದೇಶ ನೀಡಲಾಗಿದೆ.

ಸಿ. ಸರ್ವೋನ್ನತ ನ್ಯಾಯಾಲಯವು ಲೋಕೋಪಯೋಗಿ ಇಲಾಖೆಯ ದಿನಗೂಲಿ ನೌಕರರ ರಿಟ್ ಅರ್ಜಿ ಸಂಖ್ಯೆ ೮೩೦೧-೧೧/೮೩೦ ಬಗ್ಗೆ ಎರಡೂ ಕಡೆಯ ವಾದವಿವಾದಗಳನ್ನು ಕೇಳಿ, ದಿ. ೨೩-೨-೧೯೯೦ ರಂದು ಅಂತಿಮ ತೀರ್ಪನ್ನು ಕೊಟ್ಟಿದೆ. ಸರ್ವೋನ್ನತ ನ್ಯಾಯಾಲಯದ ಆದೇಶ ಪ್ರತಿಯು ದಿನಾಂಕ ೧೨-೩-೧೯೯೦ರಂದು ಸರ್ಕಾರಕ್ಕೆ ಬಂದಿದೆ ಮತ್ತು ಸರ್ವೋನ್ನತ ನ್ಯಾಯಾಲಯದ ಈ ತೀರ್ಪನ್ನು ಸರ್ಕಾರಿ ಇಲಾಖೆಯ ದಿನಗೂಲಿ ನೌಕರರಿಗೆ ಅನ್ವಯಿಸಲು ನಿರ್ಣಯವನ್ನು ತೆಗೆದುಕೊಂಡಿದೆ. ಸರ್ವೋನ್ನತ ನ್ಯಾಯಾಲಯವು ನೀಡಿರುವ ಆದೇಶಗಳ ಹಿನ್ನೆಲೆಯಲ್ಲಿ ವಿಸಲಾತಿ ಆದೇಶಗಳನ್ನು ದಿನಗೂಲಿ ನೌಕರರಿಗೆ ಅನ್ವಯಿಸಲು ಸಾಧ್ಯವಾಗಲಾರದು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಮಾನ್ಯ ಅಧ್ಯಕ್ಷರೇ ಇಲ್ಲಿ ಏನಾಗಿದೆ ಎಂದರೆ ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನಲ್ಲೂ ಅಲ್ಲಿರತಕ್ಕಂಥ ಹೆಡ್ಸ್ ಆಫ್ ದಿ ಡಿಪಾರ್ಟ್‌ಮೆಂಟ್ಸ್ ಟೆಂಪರರಿ ಅಪಾಯಿಂಟ್‌ಮೆಂಟ್ಸ್ ಮಾಡಿಕೊಂಡಿರುತ್ತಾರೆ. ಆ ಮೇಲೆ ಅವರು ೨೪೦ ದಿವಸ ಪೂರ್ತಿ ಕೆಲಸ ಮಾಡಿದ ಮೇಲೆ ಅವರನ್ನು ರೆಗ್ಯುಲರೈಜ್ ಮಾಡಿ ಎಂದು ಫ್ಲೀ ಮಾಡುತ್ತಾರೆ. ಆವರನ್ನು ಮಾನವೀಯಂತೆ ದೃಷ್ಟಿಯಿಂದ ರೆಗ್ಯುಲರೈಜ್ ಮಾಡುತ್ತಾರೆ. ಈ ರೀತಿ ಆದರೆ ವಿಸಲಾತಿ ನಿಯಮವನ್ನು ರೋಸ್ಟರ್ ಸಿಸ್ಟಂ ಪ್ರಕಾರ ಯಾವ ರೀತಿ ಜಾರಿಗೆ ತರಲು ಸಾಧ್ಯವಾಗುತ್ತದೆ?

ಈಗ ಎಷ್ಟೋ ಕಾರ್ಪೊರೇಷನ್‌ಗಳನ್ನು ಮಾಡುತ್ತಿರುತ್ತೀರಿ. ಲಿಫ್ಟ್ ಇರಿಗೇಷನ್‌ಕಾರ್ಪೊರೇಷನ್ ಹಿಂದೆ ಮಾಡಿದ್ದಾರೆ. ಆಗ ಅನೇಕ ಇಂಜಿನಿಯರ್‌ಗಳನ್ನು ಮತ್ತು ಇನ್‌ಸ್ಪೆಕ್ಟರ್‌ಗಳನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ ಮತ್ತು ಡೈಲಿ ವೇಜಸ್ ಮೇಲೆ ಮೇಸ್ತ್ರಿಗಳು ಮತ್ತು ಇನ್ನಿತರರನ್ನು ನೇಮಕ ಮಾಡಿಕೊಂಡಿದ್ದಾರೆ. ಇವತ್ತು ಅವರಲ್ಲರೂ ಕೋರ್ಟ್ ಆರ್ಡರ್‌ರಂ ಅನ್ನು ತೋರಿಸಿದಾಗ ನೀವು ಅವರನ್ನು ರೆಗ್ಯುಲರೈಸ್ ಮಾಡಿದರೆ ವಿಸಲಾತಿ ವರ್ಗಗಳಿಗೆ ನೀವು ನ್ಯಾಯ ದೊರಕಿಸುವುದು ಯಾವಾಗ? ಒಂದು ಪಕ್ಷ ನೀವು ಅವರನ್ನೆಲ್ಲ ರೆಗ್ಯುಲರೈಸ್ ಮಾಡುವುದೇ ಆದರೆ ಈ ರಿಸರ್ವೇಷನ್ ಕೋಟಾ ತುಂಬಲು ವಿಶೇಷ ನೇಮಕಗಳನ್ನು ಏನಾದರೂ ಮಾಡುತ್ತೀರಾ? ಬಿ ಸಿ ಮತ್ತು ಡಿ ದರ್ಜೆಗಳಲ್ಲಿ ಎಷ್ಟು ಜನ ದಿನಗೂಲಿ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ ಎಸ್‌ಸಿ ಎಸ್‌ಟಿ ಯವರು ಎಷ್ಟಿದ್ದಾರೆ? ಒಂದು ಪಕ್ಷ ಎಸ್‌ಸಿ ಎಸ್‌ಟಿ ಯವರು ಕಡಿಮೆಯಿದ್ದರೆ ಉಳಿದ ಭಾಗಗಳನ್ನು ವಿಸಲಾತಿಯ ಪ್ರಕಾರ ಭರ್ತಿ ಮಾಡುವುದಕ್ಕೆ ಹೊಸ ರಿಸರ್ವೇಷನ್ ಪಾಲಿಸಿಯನ್ನು ಆಡಾಪ್ಟ್ ಮಾಡಿಕೊಂಡು ಸ್ಪೆಷಲ್ ರಿಕ್ರೂಟ್‌ಮೆಂಟ್ ಏನಾದರೂ ಮಾಡುತ್ತೀರಾ? ಹೇಗೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು?

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಅಧ್ಯಕ್ಷರೇ, ಈಗ ಈ ದಿನಗೂಲಿ ನೌಕರರನ್ನು ಬೇರೆ ಬೇರೆ ಇಲಾಖೆಗಳಲ್ಲಿ ತೆಗೆದುಕೊಂಡಾಗ ಈ ರಿಸರ್ವೇಷನ್ ಪಾಲಿಸಿಯ ಪ್ರಕಾರ ತೆಗೆದುಕೊಳ್ಳಲಾಗಿದೆಯೋ ಇಲ್ಲವೋ ಎಂಬುದನ್ನು ಸರ್ಕಾರ ನೋಡಬೇಕಾಗಿದೆ. ಮತ್ತೊಂದು ವಿಚಾರವೆಂದರೆ ದಿನಗೂಲಿ ನೌಕರರನ್ನು ನೇಮಕ ಮಾಡುವಾಗ ಆಯಾ ಇಲಾಖೆಗಳಲ್ಲಿ ಸರಿಯಾದ ಎಕ್ಸಿಸ್ಟಿಂಗ್ ವೇಕೆನ್ಸಿಯಲ್ಲಿ ಅಥವಾ ಮಂಜೂರಾದ ವೇಕೆನ್ಸಿಯಲ್ಲಿ ಮಾಡಿದ್ದಾರೋ ಅಥವಾ ಇಲ್ಲವೋ ಎಂಬ ಪ್ರಶ್ನೆ ಕೂಡ ಇದೆ. ಒಂದು ವೇಳೆ ಅಲ್ಲಿ ಎಕ್ಸಿಸ್ಟಿಂಗ್ ವೇಕೆನ್ಸಿ ಇದ್ದರೆ ಮಾನ್ಯ ಶಾಸಕರು ಹೇಳಿದಂತೆ ಎಸ್‌ಸಿಎಸ್‌ಟಿ ಜನರನ್ನು ಸ್ಪೆಷಲ್ ರೆಕ್ರೂಟ್‌ಮೆಂಟ್ ಮೂಲಕ ತುಂಬುವ ಪ್ರಶ್ನೆ ಉದ್ಭವ ಆಗುತ್ತದೆ. ಈಗ ರಿಸರ್ವೇಷನ್ ಪಾಲಿಸಿಯನ್ನು ಎಲ್ಲ ಇಲಾಖೆಗಳಲ್ಲೂ ಕಟ್ಟುನಿಟ್ಟಾಗಿ ಅನ್ವಯ ಮಾಡಬೇಕೆನ್ನುವುದೇ ನಮ್ಮ ಸರ್ಕಾರದ ನೀತಿ ಆಗಿದೆ. ಈ ಬಗ್ಗೆ ನಾವು ಸುಪ್ರೀಂ ಕೋರ್ಟ್ ಮುಂದೆ ವಾದ ಮಾಡಿದ್ದೇವೆ. ಆದರೂ ಸುಪ್ರೀಂ ಕೋರ್ಟಿನವರು ದಿನಗೂಲಿಯವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಇದಂ ಬೈಂಡಿಂಗ್. ನಾವು ಹಾಗೆ ಮಾಡದಿದ್ದರೆ ನ್ಯಾಯಾಲಯ ನಿಂದನೆಗೆ ಗುರಿಯಾಗಬೇಕಾಗುತ್ತದೆ. ೧-೭ ೪೪ರೊಳಗೆ ಯಾರು ದಿನಗೂಲಿ ನೌಕರರಾಗಿ ಬೇರೆ ಬೇರೆ ಇಲಾಖೆಗಳಲ್ಲಿ ನೇಮಕವಾಗಿದ್ದರೋ ಅವರಿಗೆ ಮಾತ್ರ ಸುಪ್ರೀಂ ಕೋರ್ಟ್ ತೀರ್ಪು ಅನ್ವಯವಾಗುತ್ತದೆ, ಅನಂತರ ನೇಮಕವಾದವರಿಗೆ ಈ ಕೋರ್ಟಿನ ಆರ್ಡ್ಲ್ ಅನ್ವಯವಾಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ನಾನು ಕೇಳಿದ್ದಕ್ಕೆ ನೀವು ಉತ್ತರ ಹೇಳಲಿಲ್ಲ. ನಾನು ಕೇಳಿದ್ದು ಬಿ ಸಿ ಮತ್ತು ಡಿ ದರ್ಜೆಗಳಲ್ಲಿ ಒಟ್ಟು ಎಷ್ಟು ದಿನಗೂಲಿಯವರಿದ್ದಾರೆ. ಅವರ ಪೈಕಿ ಎಷ್ಟು ಜನ ಎಸ್‌ಸಿ ಯವರಿದ್ದಾರೆ. ಒಂದು ವೇಳೆ ಅವರು ಕಡಿಮೆ ಇದ್ದರೆ ರೋಸ್ಟರ್ ಪ್ರಕಾರ ಭರ್ತಿ ಮಾಡಲು ಸ್ಪೆಷಲ್ ರಿಕ್ರೂಟ್‌ಮೆಂಟ್ ಏನಾದರೂ ಮಾಡುತ್ತೀರಾ? ಏಕೆಂದರೆ ಈಗ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಸೆಂಟಿನರಿ ವರ್ಷದ ಪ್ರಯುಕ್ತ ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡುತ್ತೇವೆ ಅವರಿಗೆ ಮನೆ ಕಟ್ಟಿಸಿಕೊಡುತ್ತೇವೆ, ಎಂದಲ್ಲಾ ನೂರಾರು ಹೇಳಿದ್ದೀರಿ. ಈ ಕೆಲಸಕ್ಕೆ ಬಹಳ ದಿವಸಗಳು ಏನೂ ಬೇಕಾಗಿಲ್ಲ. ೩೦ ದಿವಸಗಳು ನೋಟಿಫಿಕೇಷನ್‌ಗೆ ಬೇಕು. ೩೦ ದಿವಸಗಳಲ್ಲಿ ರೆಕ್ರೂಟ್‌ಮೆಂಟ್‌ಗೆ ಬೇಕು. ಮತ್ತೆ ಒಂದು ತಿಂಗಳಲ್ಲಿ ಸೆಲೆಕ್ಷನ್ ಮಾಡಿ ೩ ತಿಂಗಳಲ್ಲಿ ಮುಗಿಸಬಹುದು. ಅದಕ್ಕೆ ನಾನು ಕೇಳಿದ್ದು.

ಪ್ರತಿಯೊಂದು ಕ್ಯಾಟಗರಿಯಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ, ಅವರಲ್ಲಿ ಎಸ್.ಸಿ. ಮತ್ತು ಎಸ್.ಟಿ. ಜನರು ಎಷ್ಟಿದ್ದಾರೆ ಎಂದು ಅದೇ ರೀತಿ ಬಿ.ಸಿ. ಮತ್ತು ಬಿ.ಟಿ. ಕ್ಯಾಟಗರಿಯವರಿಗೂ ನೀವು ರಿಸರ್ವೇಷನ್ ಕೊಡಬೇಕಾಗುತ್ತದೆ. ಆದ್ದರಿಂದ ಇವರೂ ಸಹ ಒಟ್ಟು ದಿನಗೂಲಿಯವರಲ್ಲಿ ಎಷ್ಟು ಜನರಿದ್ದಾರೆ ಎಂದು ಹೇಳಿದರೆ ನಮಗೆ ಗೊತ್ತಾಗುತ್ತದೆ. ಇದರಿಂದ ಇಷ್ಟು ಜನರಿಗೆ ಆನ್ಯಾಯ ವಾಗಿರುವುದರಿಂದ ಸರ್ಕಾರ ಇದನ್ನು ಸರಿಪಡಿಸಲು ತುರ್ತು ಕ್ರಮ ತೆಗೆದುಕೊಳ್ಳುತ್ತದೆ ಎಂದು ಸಾರ್ವಜನಿಕರೂ ಸಹ ನಿರೀಕ್ಷೆ ಮಾಡುತ್ತಾರೆ. ಇದನ್ನು ನೀವು ಸ್ಪಷ್ಟಪಡಿಸದಿದ್ದರೆ ಇವತ್ತು ಡೈಲಿ ವೇಜಸ್‌ನವರು ಖಿರ್ಗೆಯವರು ಬಡವರ ವಿರುದ್ಧವಾಗಿದ್ದಾರೆ, ಸರ್ಕಾರ ಖಾಯಂ ಮಾಡಬೇಕೆಂದಿತ್ತು, ಆದರೆ ಇವರು ಪ್ರಶ್ನೆ ಕೇಳಿ ಅದಕ್ಕೆ ತಡೆಯೊಡ್ಡಿದರು ಎಂಬ ಆಪಾದನೆ ನಮ್ಮ ಮೇಲೆ ಬರುತ್ತದೆ ನಮ್ಮ ಹಕ್ಕನ್ನು ಸರ್ಕಾರ ರಕ್ಷಣೆ ಮಾಡದೇ ಹೋದರೆ ಇನ್ಯಾರು ಮಾಡಬೇಕು. ಆದ್ದರಿಂದ ದಯವಿಟ್ಟು ಸರ್ಕಾರದ ನೀತಿ ಏನು? ಎಷ್ಟು ಜನರಿಗೆ ಸ್ಪೆಷಲ್ ರೆಕ್ರೂಟ್‌ಮೆಂಟ್ ಆನ್ನು ಮಾಡುತ್ತೀರಿ?

ಯಾವ ಯಾವ ಕ್ಯಾಟಗರಿಯಲ್ಲಿ ಮಾಡುತ್ತೀರಿ ಎನ್ನತಕ್ಕಂಥದ್ದನ್ನು ಸ್ಪಷ್ಟವಾಗಿ ಹೇಳಿದರೆ ನಾವು ಕೂಡಾ ಬೇರೆ ಜನರಿಗೆ ಹೇಳಬಹುದು, ನಿಮಗೆ ಆನ್ಯಾಯವಾಗಿದ್ದರೆ ಅದನ್ನು ಸರಿಪಡಿಸುತ್ತಾರೆ ಎಂದು ಹೇಳಬಹುದು. ಪ್ರತಿಯೊಂದು ಕಾರ್ಪೊರೇಷನ್‌ನಲ್ಲೆಯೂ, ಅಂದರೆ ಅದು ಲಿಫ್ಟ್ ಇರಿಗೇಶನ್ ಕಾರ್ಪೊರೇಷನ್ ಇರಬಹುದು, ಟೂರಿಸಂ ಕಾರ್ಪೊರೇಷನ್ ಇರಬಹುದು, ಎಲ್ಲಾ ಕಾರ್ಪೊರೇಷನ್‌ಗಳ ಲ್ಲಿಯೂ ಅಥವಾ ನಮ್ಮ ಪಿ.ಡಬ್ಲ್ಯೂ.ಡಿ ಯಲ್ಲಿ ಬೇಕು. ಬೇಕಾದವರನ್ನು ಯಾವ ಜಾತಿ ಜನರು ಬಂದರೂ ಕೂಡಾ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್‌ನವರು ಅಪಾಯಿಂಟ್ ಮಾಡಿಕೊಂಡು ಬಿಡುತ್ತಾರೆ ಮುಂದೆ ನೋಡೋಣ ಎಂದು ಹೇಳಿ. ಅದೇ ರೀತಿಯಾಗಿ ಮುಂದೆ ಹೋದಾಗ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನಿಂದ ಆರ್ಡರನ್ನು ತಂದು ರೆಗ್ಯುಲರೈಸ್ ಮಾಡಿಕೊಂಡು ಬಿಡುತ್ತಾರೆ. ಆಗ ನಾವು ಏನಾದರೂ ಕೇಳಿದರೆ ಕೋರ್ಟ್ ಆದೇಶ ಇದೆ. ನಾವು ಏನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳು ತ್ತಾರೆ. ನಾವು ಆರ್ಗ್ಯುಮೆಂಟ್ ಮಾಡಿದರೂ ಹೈಕೋರ್ಟ್‌ನವರು ಕೇಳಲಿಲ್ಲ. ಸುಪ್ರೀಂ ಕೋರ್ಟ್‌ನವರು ಕೇಳಲಿಲ್ಲ. ಆದಕ್ಕೆ ರೆಗ್ಯುಲರೈಸ್ ಮಾಡುತ್ತೇವೆ ಎಂದು ಹೇಳುತ್ತಾರೆ ಈ ರೀತಿಯಾದರೆ ಬೇರೆಯವರಿಗೆ ಆನ್ಯಾಯವಾಗುತ್ತದೆ. ಇದನ್ನು ಸರಿಪಡಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ಎನ್ನತಕ್ಕಂಥ ದ್ದನ್ನು ನೋಡಿಸ್ಪೆಲ್ಲೌಟ್ ಮಾಡಿ. ಅಲ್ಲ ಎಷ್ಟು ವೇಕೆನ್ಸಿ ಇದೆ, ಎಷ್ಟು ಜನರು ಕೆಲಸ ಮಾಡುತ್ತಿದ್ದಾರೆ ಎನ್ನತಕ್ಕಂಥದ್ದನ್ನು ಕೂಡಾ ತಾವು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಇನ್ನು ಮುಂದೆ ಇಂಥ ದಿನಗೂಲಿ ನೌಕರ ರನ್ನು ನೇಮಕ ಮಾಡಿದರೆ ಯಾರು ಅವರನ್ನು ನೇಮಕ ಮಾಡುತ್ತಾರೆ, ಅವರ ಸಂಬಳದಿಂದಲೇ ಅವನ್ನು ರಿಕವರಿ ಮಾಡುತ್ತೇವೆ ಎಂದು ಕಟ್ಟುನಿಟ್ಟಾದ ಆಜ್ಞೆಯನ್ನು ಕೊಟ್ಟಿದ್ದೇವೆ. ಆದ್ದರಿಂದ ಈ ರೀತಿ ಇನ್ನು ಮುಂದೆ ಅಪಾಯಿಂಟ್ ಮಾಡುವುದಕ್ಕಾಗುವುದಿಲ್ಲ. ಇನ್ನು ಸನ್ಮಾನ್ಯ ಶಾಸಕರ ಕಳಕಳಿ ಏನೆಂದರೆ, ಎಷ್ಟು ಜನರು ರಿಸರ್ವೇಷನ್ ಮತ್ತು ರೋಸ್ಟರ್ ಸಿಸ್ಟಂನಲ್ಲಿ ಇದ್ದಾರೆ, ಎಷ್ಟು ಜನ ಬೇರೆ ಬೇರೆ ಕ್ಯಾಟಗರಿಯಲ್ಲಿ ಇದ್ದಾರೆ ಎಂದು ಕೇಳಿದ್ದಾರೆ. ಸುಮಾರು ೫೦ ಸಾವಿರ ಸಂಖ್ಯೆ ಇದ್ದಾರೆ. ೧–೭–೮೪ರ ಮೊದಲು ನೇಮಕವಾದವರು ಎ.ಬಿ.ಸಿ.ಡಿ. ವರ್ಗದಲ್ಲಿ ಇದ್ದಾರೆ ಈಗ ಅದರಲ್ಲಿ ಯಾ-ಾರು ಇದ್ದಾರೆ ? ಎಷ್ಟು ಜನ ಯಾವ ಯಾವ ಇಲಾಖೆಯಲ್ಲಿ ಇದ್ದಾರೆ ? ಅದರ ಸಂಪೂರ್ಣವಾದಂಥ ವಿವರ ನನ್ನ ಮುಂದೆ ಇಲ್ಲ.

SRI M. MALLIKARJUNA KHARGE.—Then how you have argued before the Supreme Court ಪೆಡ್ಯೂಲ್ಡ್ ಕ್ಯಾಸ್ಟ್‌ಗೆ ಆನ್ಯಾಯವಾಗುತ್ತಿದೆ, ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ಗೆ ಆನ್ಯಾಯವಾಗುತ್ತಿದೆ ಎಂದು ಹೇಗೆ ಆರ್ಗ್ಯು ಮಾಡಿದಿರಿ ನೀವು ಇದನ್ನೆಲ್ಲಾ ಹೇಳಿದ್ದಿದ್ದರೆ ನಿಜವಾಗಲೂ ಅವರು ಒಪ್ಪುತ್ತಿರಲಿಲ್ಲ.

SRI M. VEERAPPA MOILY.—All the particulars we have given to the Supreme Court. ರೋಸ್ಟರ್ ಸಿಸ್ಟಂ ಇದರಿಂದ ಮುರಿಯುತ್ತದೆ. ಇದಕ್ಕೆ ತೊಂದರೆಯಾಗುತ್ತದೆ ಎನ್ನುವ ವಾದವನ್ನೆಲ್ಲಾ ಸುಪ್ರೀಂ ಕೋರ್ಟ್‌ನಲ್ಲಿ ಹೇಳಿದ್ದೇವೆ we have the details.

SRI M. MALLIKARJUNA KHARGE.—How you have argued without the facts ? If you have argued, give us facts and figures.

ಅಧ್ಯಕ್ಷರು.—ಮಿಸ್ಟರ್ ಖಿರ್ಗೆ, ಅವರು ಹೇಳುತ್ತಿರತಕ್ಕಂಥದ್ದು ಏನೆಂದರೆ, ಈಗ ವಿವರ ಇಲ್ಲ, All these points have been raised and presented on behalf of the Government before the Supreme Court.

(ಮುಂದಲೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—I am sorry Sir. ಇದು ದುರ್ದೈವ ಸರ್ಕಾರದ ನೀತಿ ಇದೆ ಎನ್ನತಕ್ಕಂಥದ್ದಲ್ಲ ಪೆಡ್ಡೂಲ್ಡ್ ಕ್ಯಾಸ್ಟ್‌ಗೆ ಎರಡು ಸರ್ಕಾರದಲ್ಲೂ ಹಾಗೆ ಆಗಿದೆ.ಹೋದಸಲ ಈ ಪ್ರಶ್ನೆ ಈ ಸದನದಲ್ಲಿ ಬಂದಿತ್ತು. ಹುಬ್ಬಳ್ಳಿಯಲ್ಲಿ ಸೆಕ್ರೆಟರಿಯವರೊಬ್ಬರು ಶರ್ಮ ಎಂದು ಡೈಲಿ ವೇಜಸ್ ಬಗ್ಗೆ ಅವರು ಇದನ್ನು ಪ್ರಸ್ತಾಪ ಮಾಡಿದಾಗ ಈ ಪ್ರಶ್ನೆ ಸದನದಲ್ಲಿ ಬಂದಾಗ ನಾವು ಇದನ್ನೇ ಕೇಳಿದ್ದೆವು ಈ ರೀತಿ ನಿಮ್ಮಲ್ಲಿ ಫ್ಯಾಕ್ಟ್‌ನ ಅಂಡ್ ಫಿಗರ್ಸ್ ಇರಲಿಲ್ಲ ಎಂದು ಹೇಳಿದರೆ ಸುಪ್ರೀಂ ಕೋರ್ಟ್‌ನಲ್ಲಿ ವಾದ ಹೇಗೆ ಮಾಡಿದಿರಿ ? ಆ ರೀತಿ ವಾದ ಮಾಡಬೇಕಾಗಿದ್ದರೆ ನಿಮ್ಮಲ್ಲಿ ಪೆಡ್ಡೂಲ್ಡ್ ಕ್ಯಾಸ್ಟ್, ಬ್ಯಾಕ್‌ವರ್ಡ್ ಕ್ಯಾಸ್ಟ್‌ನಲ್ಲಿ ಎಷ್ಟು ಇದ್ದಾರೆ. ಆ ರೀತಿ ಅವರನ್ನು ರೆಗ್ಯೂಲರೈಸ್ ಮಾಡಿದರೆ ಆ ಜನರಿಗೆ ಅನ್ಯಾಯವಾಗುತ್ತದೆ. ರೊಸ್ಟರ್ ಪಿಸ್ಟಂನ್ನು ಫಾಲೋ ಮಾಡಬೇಕೆ ಹೋದರೆ ತೊಂದರೆಯಾಗುತ್ತದೆ ಎನ್ನತಕ್ಕಂಥ ವಾದ ನಿಮ್ಮದು ಇರಬೇಕಲ್ಲ. ಆ ರೀತಿ ಇದ್ದಾಗ ಫ್ಯಾಕ್ಟ್‌ನ ಅಂಡ್ ಫಿಗರ್ಸ್ ಇಲ್ಲದೆ ಅಲ್ಲಿ ವಾದ ಹೇಗೆ ಮಾಡಿದಿರಿ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸುಪ್ರೀಂ ಕೋರ್ಟ್ ಮುಂದೆ ನಮ್ಮ ವಾದವನ್ನು ಈ ಸಂವಿಧಾನದ ಆರ್ಟಿಕಲ್ ೧೪ರ ಬಗ್ಗೆ ಮಾಡಿದ್ದೇವೆ. ಆರ್ಟಿಕಲ್೧೪ ಮತ್ತು ೧೬ ವಯೋಲೇಟ್ ಆಗುತ್ತದೆ ಎಂಬ ವಿಚಾರವನ್ನು ಕೂಡಾ ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಾಡಲಾಗಿದೆ. ಈಗ ತಮಗೆ ಮಾಹಿತಿ ಏನು ಬೇಕಾಗಿದೆ ಎಂದು ಹೇಳಿದರೆ ಎಷ್ಟಷ್ಟು ಮಂದಿ ಯಾವ ಯಾವ ಇಲಾಖೆಯಲ್ಲಿದ್ದಾರೆ, ಎಷ್ಟೆಷ್ಟು ಕ್ಯಾಟಗೂರಿಯಲ್ಲಿ ಇದ್ದಾರೆ ಎನ್ನುವ ಸ್ಪಷ್ಟವಾದ ವಿವರ ಬೇಕು. ಅದನ್ನು ಸದನಕ್ಕೆ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. We will give it in course of time. ತಮಗೆ ಈ ವಿವರವನ್ನು ನಾವು ಕೊಡುತ್ತೇವೆ. ವಿಸಲಾತಿ ನಿಯಮದ ಪ್ರಕಾರ ೪೦ ಸಾವಿರ ಕೆಲಸಗಾರರನ್ನು ಕ್ಯಾಟೆಗೊರೈಸ್ ಮಾಡಿಕೊಂಡು ಅದಕ್ಕೆ ಸ್ಪಷ್ಟವಾದ ವಿವರವನ್ನು ಕೊಡಬೇಕಾಗುತ್ತದೆ. ತಾವು ಮಾಹಿತಿಯನ್ನು ಕೇಳಿದ ಮೇಲೆ ಕೊಡಬೇಕಾಗುತ್ತದೆ, ಇಲ್ಲದಿದ್ದರೆ ಹೆಚ್ಚು ಕಡಿಮೆ ಆಗಬಾರದು. ಈ ವಿವರ ಸದನಕ್ಕೆ ಯಾವಾಗ ಬೇಕೋ ಅದನ್ನು ಕೊಡಲಿಕ್ಕೆ ಸಿದ್ಧರಿದ್ದೇವೆ, ಅದನ್ನು ಕೊಡುತ್ತೇವೆ.

SRI M. MALLIKARJUNA KHARGE.—I am sorry Sir.

SRI M. VEERAPPA MOILY —Either you should speak or I should. Simultaneously, both of us cannot speak. ನಾನು ಕುಳಿತುಕೊಂಡಮೇಲೆ ತಾವು ಎದ್ದು ನಿಂತು ಮಾತನಾಡಿದರೆ ಒಳ್ಳೆಯದು ಸೈಮಲ್ಟೇನಿಯಸ್ ಆಗಿ ಇಬ್ಬರು ಮಾತನಾಡಿದರೆ ನಾನು ಏನೂ ವಿಚಾರ ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ತಮ್ಮ ವಿಚಾರವನ್ನೂ ಸಹ ತಾವು ಹೇಳುವುದಕ್ಕಾಗುವುದಿಲ್ಲ. ನನ್ನ ವಿಚಾರವನ್ನು ಕೂಡಾ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಈ ರೀತಿ ಉತ್ತರವನ್ನು ಹೇಳಿದರೆ ನಾವು ಕೂಡಾ ಹೇಳಬೇಕಾಗುತ್ತದೆ. I never expected this type of reply from you.

ಅಧ್ಯಕ್ಷರು.— ಮಾನ್ಯ ಕಾಗೋಡು ತಿಮ್ಮಪ್ಪನವರೇ. ಮಾನ್ಯ ಸಚಿವರು ಏನು ಉತ್ತರವನ್ನು ಆಫೆಂಡ್ ಮಾಡತಕ್ಕಂಥ ರೀತಿಯಲ್ಲಿ ಹೇಳಲಿಲ್ಲವಲ್ಲ. ಏನು ಮಾನ್ಯ ಖರ್ಗೆಯವರು ಪ್ರಶ್ನೆಯನ್ನು ಕೇಳಿದ್ದಾರೆ ಅದಕ್ಕೆ ಅಂಕಿ ಅಂಶಗಳನ್ನು ನಾನು ಸದನಕ್ಕೆ ಒದಗಿಸಿಕೊಡುತ್ತೇನೆ ಎಂದು ಮಾತ್ರ ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ —ಸುಪ್ರೀಂ ಕೋರ್ಟ್‌ನಲ್ಲಿ ತೀರ್ಮಾನ ಆಗಿರತಕ್ಕದ್ದು ರಿಸರ್ವೇಷನ್ ಪ್ರಶ್ನೆ ಇಲ್ಲವೇ ಇಲ್ಲ. ಈಗ ನಿಮ್ಮ ನೇಮಕ ಮಾಡಿದ್ದಾರೆ, ಅವರನ್ನು ಖಾಯಂ ಮಾಡುವ ಬಗ್ಗೆ, ಪ್ರಶ್ನೆ ಅಷ್ಟಕ್ಕೇ ಸೀಮಿತ ಆಗಿರತಕ್ಕದ್ದು.

ಅಧ್ಯಕ್ಷರು —ಈಗ ಕೇಂದ್ರ ಮೂರ್ತಿಯವರು ಕೇಳುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.— ಸುಪ್ರೀಂಕೋರ್ಟ್‌ನವರು ಅವರ ಮೇಲೆ ಬೈಂಡಿಂಗ್ಸ್ ಕೊಡುವುದಕ್ಕೆ ಬರುವುದಿಲ್ಲ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಬಗ್ಗೆ ಸರ್ಕಾರದ ನಿಲುವೇನು ? ಸ್ಪೆಷಲ್ ರೆಕ್ಕಾರ್ಟ್ ಮೆಂಟ್ ಮಾಡುತ್ತಾರೋ ಏನೂ ಇಲ್ಲವೋ ?

SRI M. VEERAPPA MOILY.—Sir, let me read his calling attention notice. It reads thus.

"I call the attention of the Hon. Chief Minister with regard to the observation of reservation rules while regularising the services of daily wage employees according to the order of the Supreme Court."

ಈಗ ಇದರ ಪ್ರಕಾರ ನಾವು ಹೇಳಿದ್ದೇವೆ. ನಾವು ಸುಪ್ರೀಂ ಕೋರ್ಟ್‌ನಲ್ಲಿ ಈ ವಿಷಯವನ್ನು ಅನುಸರಿಸಬೇಕು ಎಂದು ನಾವು ಆರ್ಟಿಕಲ್ ೧೪ ಹಾಗೂ ೧೬ರ ಪ್ರಕಾರ ಮಾಡಬೇಕು ಎಂದು ವಾದ ನಮ್ಮಲ್ಲಿದ್ದರೂ ಕೂಡ ೧-೭-೧೯೮೮ರೊಳಗೆ ನೇಮಕಾತಿ ಆದ ಎಲ್ಲ ದಿನ ಗೂಲಿ ನೌಕರರನ್ನು ಸಾರಾಸಗಟಾಗಿ ತೆಗೆದುಕೊಳ್ಳಬೇಕೆಂದು ಸುಪ್ರೀಂ ಕೋರ್ಟ್ ಆದೇಶ ಕೊಟ್ಟಿದ್ದಾರೆ. They have not conceded to our argument, ಈಗ ಮಾನ್ಯ ಸದಸ್ಯರು ಕೆಲವೊಂದು ವಿವರ ಕೇಳಿದ್ದಾರೆ. ವಿವರ ಬೇಕು ಎಂದು ಅವರು ಮೊದಲೇ ಕೇಳಿದ್ದರೆ ನಾವು ಕೊಡಬಹುದಿತ್ತು. If they want details, we will give. The details are voluminous. Once we submit, we should not go wrong on that. We should not mislead. We will provide the details.

MR. SPEAKER.—I would suggest via-media. I will take up the Calling Attention Notice again. You please come with all the relevant facts and figures ಮಾನ್ಯ ಖರ್ಗೆಯವರೇ, ಈ ಗಮನ ಸೆಳೆಯುವ ಸೂಚನೆಯನ್ನು ಮುಂದೆ ತಡೆ ಹಿಡಿಯುತ್ತೇನೆ. ಮುಂದೆ ಇನ್ನು ಒಂದು ವಾರ ಆದ ಮೇಲೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಕೊಡುತ್ತಾರೆ. ಆಗ ಚರ್ಚೆ ಮಾಡೋಣ.

ನಿಯಮ ೩೩ಳಿರ ಮೇರೆಗೆ

(೧) ಬಂಟ್ವಾಳ ತಾಲ್ಲೂಕಿನ ಬೋಳೊಂತೂರು ಗ್ರಾಮದ ಮಂರಕಜೆಯ ನಿವಾಸಿ ಶ್ರೀ ಕೃಷ್ಣ ಭಟ್ ಎಂಬುವರಂ ಸರ್ಕಾರಿ ಜಮೀನನ್ನು ಅತಿಕ್ರಮಣ ಮಾಡಿರುವುದು,

ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಬೋಳಂತೂರು ಗ್ರಾಮದ ಮಂರಕಜೆ ಎಂಬಲ್ಲಿಯ ನಿವಾಸಿ ಶ್ರೀ ಕೃಷ್ಣ ಭಟ್ ಎಂಬುವರು, ಸುಮಾರು ೨೦-೮೦ ಎಕ್ರೆಗೂ ಮೇಲ್ಪಟ್ಟು ಸರ್ಕಾರಿ ಜಮೀನನ್ನು ಆಕ್ರಮಿಸಿ, ಸುಮಾರು ಎರಡು ವರ್ಷದಿಂದ ಬಂದಿರುವವರು. ಸದ್ರಿ ಜಮೀನಿನಲ್ಲಿ ಅನಾದಿ ಕಾಲದಿಂದ ಇದ್ದ ಸಾರ್ವಜನಿಕ ರಸ್ತೆಯನ್ನು ಮುಚ್ಚಿರುವರು. ದಾರಿ-ರಸ್ತೆಗಳನ್ನು ಮುಚ್ಚಿ ತಂತಿ ಬೇಲಿಯಿಂದ ಆಕ್ರಮಣವನ್ನು ನಿರ್ಮಿಸಿ ಕೊಂಡಿದ್ದರೂ ಸಹ ಬಂಟ್ವಾಳ ತಾಲ್ಲೂಕು ತಹಶೀಲ್ದಾರ್‌ರಾಗಲೀ, ಕಂದಾಯ ಇಲಾಖೆಯವರಾಗಲೀ ಈತನಕ, ಇಷ್ಟೊಂದು ದೊಡ್ಡ ರೀತಿಯಲ್ಲಿ ಎಕರೆಗಟ್ಟಲೆ ಜಮೀನು ಆಕ್ರಮಣಕ್ಕೆ ಸಾರ್ವಜನಿಕರ ಮನವಿ ಇದ್ದರೂ, ಕ್ರಮ ಕೈಗೊಳ್ಳದಿರಲು ಕಾರಣವೇನು ? ಈ ಕುರಿತು, ಈಗಲಾದರೂ, ಸರಕಾರ ಕ್ರಮ ಕೈಕೊಳ್ಳುವುದೇ ಎಂದು ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಪರಿಶೀಲನೆ ಮಾಡುತ್ತೇನೆಂದು ಹೇಳಿ.

ಶ್ರೀ ಕೆ. ಕುಶಾಲ.—ಅಧ್ಯಕ್ಷರೇ, ನನಗೆ ಉತ್ತರ ಬಂದಿಲ್ಲ.....

ಶ್ರೀಮತಿ ಮನೋರಮಾ ಮಂಧ್ವರಾಜ್.—ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರಗಳನ್ನು ತರಿಸಿ ಕೊಡುತ್ತೇನೆ.

ಅಧ್ಯಕ್ಷರು.—೩೩ಳಿರ ನಿಯಮ ಮೇರೆಗೆ ನೀವು ಏನು ಪ್ರಶ್ನೆ ಎತ್ತಿದ್ದೀರಿ, ಅದಕ್ಕೆ ಸರ್ಕಾರದವರು ಉತ್ತರವನ್ನು ಒದಗಿಸಿಕೊಡುತ್ತಾರೆ.